8. ಡೆಪ್ಯೂಟಿ ಕಮ್ಮಿಷ್ಟರವರು ಯಾವ ಸವಾಲನ್ನಾಗಲಿ ಯಾವ ಸಬಬೂ ತಿಳಿಸದೆ ಅಂಗೀಕರಿಸುವ ಯಾ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ.

ತಾರೀಖು 17ನೇ ಡಿಸಂಬರ್ 1886.

ಎ. ಪಿ. ಎಸ್. ಕೃಷ್ಣಮೂರ್ತಿ, ಡೆಪ್ಯೂಟಿ ಕಮ್ಮಿಷನರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 27ನೇ ಡಿಸಂಬರ್ 1886.

ಇದರಿಂದ ಸಮ್ಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೇಲೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗುತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತಾವೇಜನ್ನ ಹಾಜರ್ ಮಾಡಿದವರೇಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ಬೇಲೂರು ಸಬ್ ರಿಜಿಸ್ಟ್ರಾರರಲ್ಲಿ ಹಾಜರಾಗಿ ಸದರೀ ದಸ್ತಾವೇಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ಸಂಬರ್ ಇಂಡಿಯ್ಯ ರಿಜಿಸ್ಟ್ರೇಷನ್ ಆಕ್ಟಿನ 35ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ದಸ್ತಾವೇಜಿನ ನಂಬರ್.	ದಸ್ತಾವೇಜಿನ ತಾರೀಖು.	ದಸ್ತಾವೇಜಿಗೆ ಬಿಜೆ ಹಾಜರಾದ ತಾರೀಖು.	ದಸ್ತಾವೇಜು ಬಿಜೆ ಆದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನ ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
20 1884—85	12—6—84	13—6—84	16—7—84	ಬೇಲೂರು ತಾಲ್ಲೂಕು ಮೊದೇಹಳ್ಳಿ ಹೋಬಳಿ ಕಲ್ಲುಕೆರೆ ಪೇಟೇಯಲ್ಲಿರುವ ವೇಲೂರು ತಾಲ್ಲೂಕು ಪಳ್ಳಿಕೊಪ್ಪಡೆ ನಿವಾಸಿಯ ಮೊದೀಪಕ್ಕೀರ್‌ಸಾಬರಮಗ ಮೊಹದೀರ್‌ಸಾಬ	ಈತನ ಪಿಂಡತಿ ರೈಹಿ ಮಾರ್ಬೀಬಿ	ಬಿಳಗಳ್ಳಿ ಗ್ರಾಮದ ಸರ್ವೆ 55—56ನೇ ಪೈಕೀ 18 ಎಕರೆ 7 ಕುಂಟೆ ಆಕಾರ 15—5—0 ವುಳ್ಳ ಯೆರಡು ಬೋಂದು ತೋಟ 200 ರೂಪಾಯಿಗಳಿಗೆ ಕ್ರಯ.

ವಿ. ಡಿ. ಪೊನ್ನರಂಗಂ ಮೊದಲಿಯಾರ್,
ಫಾರ್ ರಿಜಿಸ್ಟ್ರಾರ್.

ನಗರ ಡಿವೀರ್ಜ್.

ನಗರ ಡಿವೀರ್ಜ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

1886ನೇ ಇಸವಿ ಅರ್ಜೀ ನಂಬರ್ 144.

ಮೃತಪಟ್ಟ ಚನ್ನಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸಿದ್ದಂಣ ಮೃತಪಟ್ಟ ಸದರೀ ಚನ್ನಯ್ಯನಿಗೆ ಅಕ್ಕನಮಗನು, ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ತಾಲ್ಲೂಕು ಮಲ್ಲೇ ಮಾಗಣಿ ಕುಪ್ಪೇನಹಳ್ಳಿ ಗ್ರಾಮದ ಸಿದ್ದಂಣನು ಸದರೀ ಕುಪ್ಪೇನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಚನ್ನಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸಿದ್ದಂಣನ ಅರ್ಜೀಯನ್ನು 1887ನೇ ಇಸವಿ ಜನವರೀ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬುಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1886ನೇ ಇಸವಿ ಡಿಸಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್ಹಾಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.